**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ8325/2022**

ಸಿ.ಡಬ್ಲ್ಯೂ–9 ಪಿ.ಡಬ್ಲ್ಯೂ-7

| | | |
|---|---|---|
| ಹೆಸರು | ಃ | ಅನಸೂಬಾಯಿ |
| ತಂದೆಃಗಂಡ | ಃ | ನಾಗಪ್ಪ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ನರೋಣಾ |

ದಿನಾಂಕಃ 17-01-2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ**

ಆರೋಪಿ ಪರಿಚಯ ಇರುತ್ತದೆ. ನನ್ನ ಮಗನಿಗೆ ಅಪಘಾತ ಪಡಿಸಿದವನು ಅವನೇ. ಚಾಸಾ-1 ನನ್ನ ಗಂಡ. ಚಾಸಡಾ-2 ರಿಂದ 8, 10, 11 ರವರ ಪರಿಚಯ ಇರುತ್ತದೆ. ಮೃತ ಭಗವಂತ ನನ್ನ ಮಗ. ನನ್ನ ಗಂಡನಿಗೆ ಹುಷಾರಿಲ್ಲದ ಕಾರಣ ತಾಂಡಾಗೆ ನೀರು ಬಿಡಲು ನನ್ನ ಮಗ ಹೋಗಿದ್ದನು. ಹೋದಾಗ ಅಪಘಾತ ಆಗಿರುತ್ತದೆ. ನಮಗೆ ವಿಷಯ ತಿಳಿದ ನಂತರ ನಾವು ಸ್ಥಳಕ್ಕೆ ಹೋದಾಗ ವಾಹನ ಬಿಟ್ಟು ಓಡಿ ಹೋಗಿದ್ದನು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಚಾಸಾ-1 ರವರ ಮೋಟರ ವಾಹನದ ಸಂಖ್ಯೆ ಕೆಎ-32/ಇಸಿ-4466 ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಾಹನದಲ್ಲಿ ನನ್ನ ಮಗ ಕುಶಪ್ಪನ ತಾಂಡಾಕ್ಕೆ ಹೋಗಿದ್ದನು ಎಂದರೆ ಸರಿ. ಘಟನೆ ದಿ.29.05.2022 ರಂದು ಆಗಿರುತ್ತದೆ ಎಂದರೆ ಸರಿ. ಬೆಳಗ್ಗೆ 6.45 ಗಂಟೆಗೆ ಮೃತ ಭಗವಂತ ಪ್ರತಿದಿನ ಕುಶಪ್ಪನ ತಾಂಡಾಕ್ಕೆ ನೀರು ಬಿಡಲು ಹೋಗುವುದು ಮಾಡುತ್ತಿದ್ದನು ಎಂದರೆ ಸರಿ. ಚಾಸಾ-6 ರವರು ಕರೆ ಮಾಡಿ ಮೃತ ಭಗವಂತರವರಿಗೆ ಅಪಘಾತವಾಗಿ ತಲೆಗೆ ಪೆಟ್ಟಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದು ಬೆಳಗ್ಗೆ 7.20 ಕ್ಕೆ ತಿಳಿಸಿದರು ಎಂದರೆ ಸರಿ. ಗಾಬರಿಯಾಗಿ ಚಾಸಾ-1, ನಾನು ಹಾಗೂ ಚಾಸಾ-10 ರಿಂದ 12 ರವರು ಸ್ಥಳಕ್ಕೆ ಹೋಗಿ ನೋಡಿರುತ್ತೇವೆ ಎಂದರೆ ಸರಿ. ಅಲ್ಲಿ ಹೋಗಿ ನೋಡಿದಾಗ ಚಾಸಾ-6 ರವರು ಕುಶಪ್ಪನ ತಾಂಡಾದ ಕಡೆಗೆ ಹೋಗುವಾಗ ಬ್ರಿಡ್ಜ ದಾಟಿ ಒಂದು ಕ್ರೂಸರ ಅಪಘಾತಪಡಿಸಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಮೃತ ಭಗವಂತರವರನ್ನು ನೋಡಿದಾಗ ತಲೆಗೆ ಹಾಗೂ ಮುಖಕ್ಕೆ ಭಾರಿ ರಕ್ತಗಾಯ ಆಗಿರುತ್ತದೆ ಎಂದರೆ ಸರಿ. ಕ್ರೂಸರ ಸಂಖ್ಯೆ ಕೆಎ-48/ಎ00521 ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಲಕನ ಹೆಸರು ಕೇಳಿದಾಗ ವಿಷ್ಣು ಇರುತ್ತದೆ ಎಂದರೆ ಸರಿ. ಚಾಸಾ-7, 8 ರವರು ಕ್ರೂಸರನಲ್ಲಿ ಇದ್ದು ಘಟನೆಯನ್ನು ನೋಡಿರುತ್ತಾರೆ ಎಂದರೆ ಸರಿ. ನಾನು ಈ ರೀತಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಸ.ಎಸ.ಸಿ. ವಕೀಲರಿಂದಃ</u>**

ಮೃತ ಭಗವಂತರವರಿಗೆ ಪಂಚಾಯತಿಯಲ್ಲಿ ನೀರು ಬೀಡುವ ನೌಕರಿ ಇರಲಿಲ್ಲ ಎಂದರೆ ಸರಿ. ನನ್ನ ಗಂಡನಿಗೆ ನೀರು ಬಿಡುವ ನೌಕರಿ ಇತ್ತು ಎಂದರೆ ಸರಿ. ಆರೋಪಿಯನ್ನು ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅಪಘಾತವಾದ ಸ್ಥಳದಲ್ಲಿ ಅರೋಪಿ ಹೋಗುತ್ತಿದ್ದಾಗ ಹಿಂದೆಯಿಂದ ನೋಡಿದ್ದೇನು ಎಂದು ಹೇಳುತ್ತಾರೆ. ಬೆನ್ನು ನೋಡಿದರೆ ಗುರುತು ಹಿಡಿಯಲು ಆಗುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಆರೋೇಪಿಯ ಹೆಸರು ಕೇಳಿದ ನಂತರ ನನಗೆ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಆರೋಪಿ ಹೆಸರು ಚಾಸಾ-6 ರವರು ಹೇಳಿರುತ್ತಾರೆ. ಚಾಸಾ-6 ರವರು ನಮಗೆ ಎಷ್ಟು ಗಂಟೆಗೆ ಕರೆ ಮಾಡಿರುತ್ತಾರೆ ಎಂದು ಸಮಯ ಗೊತ್ತಿಲ್ಲ. ಚಾಸಾ-6 ರವರ ತಾಯಿ ನಮ್ಮೂರಿನ ಪಂಚಾಯತಿ ಅಧ್ಯಕ್ಷರು ಎಂದರೆ ಸರಿ. ಚಾಸಾ-6 ರವರ ತಾಯಿಗೆ ಚುನಾವಣೆಯಲ್ಲಿ ನಾವೇ ಗೆದ್ದಿಸಿರುತ್ತೇವೆ ಎಂದರೆ ಸರಿ. ಚಾಸಾ-6 ರವರು ನಮಗೆ ಬೇಕಾದವರು ಎಂದರೆ ಸರಿ. ಚಾಸಾ-6 ರವರ ಮನೆ ಕಡಗಂಚಿ ಕಡೆ ಎಸ.ಸಿ. ಓಣಿಯಲ್ಲಿ ಇದೆ ಎಂದರೆ ಸರಿ. ಚಾಸಾ-6 ರವರ ಮನೆ ಕ್ಷೇತ್ರದ ಕಡೆಗೆ ಇರುವುದಿಲ್ಲ ಎಂದರೆ ಸರಿ. ಚಾಸಾ-6 ರವರ ಹೊಲಗಳು ಕಡಗಂಚಿ ಕಡೆಗೆ ಇವೆ ಎಂದರೆ ಸರಿ. ಚಾಸಾ-6 ರವರ ಹೊಲ ಹಾಗೂ ಮನೆ ಕಡಗಂಚಿ ಕಡೆ ಇರುವ ಕಾರಣ ನರೋಣಾ ಊರಿನ ಕಡೆಗೆ ಬರುವ ಪ್ರಸಂಗ ಬರುವುದಿಲ್ಲ ಎಂದರೆ ಸರಿ. ಬಸ ನಿಲ್ದಾಣದಿಂದ ಕಡಗಂಚಿ ಕಡೆಗೆ ಇರುವ ಮನೆಯವರು ಬೆಳಗ್ಗೆ ವಾಕಿಂಗ ಗಾಗಿ ಕಡಗಂಚಿ ಕಡೆಗೆ ಹೋಗುತ್ತಾರೆ ಎಂದರೆ ಸರಿ. ನಾವು ಆಲೂರ ರಸ್ತೆಯಲ್ಲಿ ಹೊಲದಲ್ಲಿ ಇರುತ್ತೇವೆ. ಘಟನಾ ಸ್ಥಳ ನಮ್ಮ ಮನೆಯಿಂದ 4-5 ಕಿ.ಮಿ. ಅಂತರದಲ್ಲಿ ಇದೆ ಎಂದರೆ ಸರಿ. ಸಾಮಾನ್ಯವಾಗಿ ನರೋಣಾ ಜನರು ಅಪಘಾತವಾದ ಸ್ಥಳದ ವರೆಗೂ ವಾಕಿಂಗಗಾಗಿ ಹೋಗುವುದಿಲ್ಲ ಎಂದರೆ ಸರಿ. ನನ್ನ ಮಗ ವಾಹನ ಚಲಾಯಿಸುವಾಗ ಇಯರಫೋನ ಬಳಸುತ್ತಿದ್ದ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿ ಕಚ್ಚಾ ರಸ್ತೆ ಇದೆ ಎಂದರೆ ಸರಿ. ಕಚ್ಚಾ ರಸ್ತೆ ಇರುವ ಕಾರಣ ಬೋಧನ ಮತ್ತು ಕುಶಪ್ಪನ ತಾಂಡಾದಿಂದ ಬರುವ ವಾಹನಗಳು ನಿಧಾನವಾಗಿ ಬರುತ್ತವೆ ಎಂದರೆ ಸರಿ. ಅಪಘಾತ ಆರೋೇಪಿಯ ತಪ್ಪಿನಿಂದ ಅಲ್ಲದೇ ನನ್ನ ಮಗನ ತಪ್ಪಿನಿಂದ ಅಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗನೇ ವಾಹನವನ್ನು ಅತಿ ವೇಗ ಮತುತ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಹೋಗಿ ಅರೋಪಿಯ ಕ್ರೂಸರ ಬಲಭಾಗಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.